International Journal of Kannada Research 2022; 8(3): 91-96

International Journal of Kannada Research
www.kannadajournal.com

ISSN: 2454–5813
IJKR 2022; 8(3): 91-96
© 2022 IJKR
www.kannadajournal.com
Received: 12-06-2022
Accepted: 15-07-2022

**ಡಾ. ಎಚ್.ಎಂ. ಮಲ್ಲಿಕಾರ್ಜುನ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾಜನ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮೀಪುರಂ ಮೈಸೂರು, ಕರ್ನಾಟಕ, ಭಾರತ

**ಡಾ. ಮೀನಾಕ್ಷಿ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಜೆಎಸ್ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಊಟಿ ರಸ್ತೆ ಮೈಸೂರು, ಕರ್ನಾಟಕ, ಭಾರತ

**Corresponding Author:**
**ಡಾ. ಎಚ್.ಎಂ. ಮಲ್ಲಿಕಾರ್ಜುನ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾಜನ ಪ್ರಥಮ ದರ್ಜೆ ಕಾಲೇಜು, ಜಯಲಕ್ಷ್ಮೀಪುರಂ ಮೈಸೂರು, ಕರ್ನಾಟಕ, ಭಾರತ

# ಕಲ್ಯಾಣ ಕ್ರಾಂತಿ: ಒಂದು ವಿವೇಚನೆ

**ಡಾ. ಎಚ್.ಎಂ. ಮಲ್ಲಿಕಾರ್ಜುನ, ಡಾ. ಮೀನಾಕ್ಷಿ**

ಕರ್ನಾಟಕದ ಚಾರಿತ್ರಿಕ–ಸಾಂಸ್ಕೃತಿಕ ಇತಿಹಾಸದಲ್ಲಿ ಚಿರವಾಗಿ ಉಳಿಯುವ, ದಾಖಲಾರ್ಹವಾದ ಸಂದರ್ಭ ೧೨ನೇ ಶತಮಾನದಲ್ಲಿ ಜರುಗಿದ ಕಲ್ಯಾಣ ಕ್ರಾಂತಿ. ಬಸವಣ್ಣ, ಅಲ್ಲಮ, ಸಿದ್ಧರಾಮ, ಚನ್ನಬಸವಣ್ಣ, ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ, ಡೋಹರ ಕಕ್ಕಯ್ಯ, ಮಾದಾರ ಚೆನ್ನಯ್ಯ, ಮೋಳಿಗೆ ಮಾರಯ್ಯ, ಮೋಳಿಗೆ ಮಹಾದೇವಿ, ಆಯ್ದಕ್ಕಿ ಮಾರಯ್ಯ, ಆಯ್ದಕ್ಕಿ ಲಕ್ಕಮ್ಮ, ಸಕಲೇಶ ಮಾದರಸ, ಮಹಾದೇವಿ ಅಕ್ಕ, ಅಕ್ಕನಾಗಮ್ಮ, ಸತ್ಯಕ್ಕ, ಗಂಗಾಂಬಿಕೆ, ನೀಲಾಂಬಿಕೆ, ಸೊಡ್ಡಳ ಬಾಚರಸ, ಶಾಂತರಸ, ಹಡಪದ ಅಪ್ಪಣ್ಣ ಹೀಗೆ ಕಾಯಕದಲ್ಲಿ ನಿರತರಾದ ಸಾವಿರಾರು ಶರಣರು ಕಲ್ಯಾಣದಲ್ಲಿ ಬಸವಣ್ಣನವರ ನೇತೃತ್ವದಲ್ಲಿ ಸಮಾನತೆಯ ಸಮಾಜಕ್ಕಾಗಿ ದುಡಿದರು. ಜಾತಿ, ಮತ, ಲಿಂಗ, ಪಂಥಗಳನ್ನು ಮೀರಿದ ದೂರಗಾಮಿಯಾದ ಪರಿಕಲ್ಪನೆಯನ್ನು ಸಮಾಜದಲ್ಲಿ ಬಿತ್ತುವುದು ಶರಣರ ಆಲೋಚನೆಯಾಗಿತ್ತು. ಶತಮಾನದ ದೌರ್ಜನ್ಯದಿಂದ ಜನಸಾಮಾನ್ಯರನ್ನು ಮುಕ್ತಿಗೊಳಿಸುವುದು, ಸರ್ವರಿಗೂ ಸಮಾನ ವೇದಿಕೆ, ಗೌರವ ಸ್ಥಾನ–ಮಾನಗಳನ್ನು ತಂದುಕೊಡುವ ಆಶಯದಂತೆಯೆ ಅನುಭವ ಮಂಟಪದಲ್ಲಿ ಎಲ್ಲಾ ಕಾರ್ಯಗಳು ಸುಗಮವಾಗಿ ನಡೆದಿದ್ದವು. ಹೆಸರಿಗಂಟಿದ್ದ ಕಾಯಕದ ಹೆಸರುಗಳೇ ಜಾತಿಗಳಾಗಿ ಪರಿವರ್ತಿವಾದುದು ಶತಮಾನದ ಶಾಪವಾಗಿತ್ತು. ಅದನ್ನು ಹೋಗಲಾಡಿಸಿ, ಕಾಯಕದ ಪರಿಕಲ್ಪನೆಯ ಮೂಲಕ ಸಾಮಾಜಿಕ, ಧಾರ್ಮಿಕ, ಆರ್ಥಿಕ, ರಾಜಕೀಯ ಸ್ಥಾನಮಾನಗಳನ್ನು ಶರಣರಿಗೆ ಒದಗಿಸಬೇಕೆಂಬ ಚಿಂತನೆಯ ಜೊತೆಗೆ ವೈಚಾರಿಕ ಆಲೋಚನೆಯ ಮೂಲಕ ಸಮಾಜದಲ್ಲಿ ಬೇರೂರಿದ್ದ ಮೌಢ್ಯವನ್ನು ಕಿತ್ತೊಗೆಯುವುದು ಬಸವಾದಿ ಶರಣರ ಆಶಯವಾಗಿತ್ತು. ಇಷ್ಟೆಲ್ಲಾ ಸಾಮಾಜಿಕ ಚಿಂತನೆಗೆ ಕೆಲವು ಕಾರಣಗಳಿಂದ ಹಿನ್ನಡೆಯಾಗುತ್ತದೆ. ಈ ಘಟನೆಯನ್ನು ಕುರಿತು ಡಾ. ಎಚ್. ತಿಪ್ಪೇರುದ್ರಸ್ವಾಮಿಯವರು ತಮ್ಮ 'ಕಲ್ಯಾಣ ಕ್ರಾಂತಿ : ಹಿಂದು–ಮುಂದು' ಕೃತಿಯಲ್ಲಿ ವಿಶ್ಲೇಷಿಸಿದ್ದಾರೆ.

ಶ್ರಿ ವಿಜಯ ಮಹಾಂತ ಶಿವಯೋಗಿಗಳವರ ಯಾತ್ರಾ ಮಹೋತ್ಸವದ ಅಂಗವಾಗಿ ಶ್ರಾವಣ ಮಾಸದ ೧೯೮೩ ನೇ ಆಗಸ್ಟ್ ೭, ೮ ಮತ್ತು ೯ ರಂದು ಇಲಕಲ್ಲಿನ ಮಠದಲ್ಲಿ ಜರುಗಿದ ಮೂರುದಿನಗಳ ಉಪನ್ಯಾಸದ ಪುಸ್ತಕ ರೂಪವೇ ಈ ಕೃತಿಯಾಗಿದೆ. "ಕಲ್ಯಾಣಕ್ರಾಂತಿಯನ್ನು ಕುರಿತ ಈ ಮೂರು ಭಾಷಣಗಳು ಕೆಲವು ಮೂಲಭೂತ ಪ್ರಶ್ನೆಗಳನ್ನು ಪರಿಶೀಲಿಸುತ್ತವೆ. ಬಸವಣ್ಣ ಬೀರಿದ ಬೆಳಕು, ಬೆಂಕಿಯಾಗಿ ಆಸ್ಫೋಟಿಸಿದುದರ ಸಾಮಾಜಿಕ ಹಿನ್ನೆಲೆಯನ್ನು ಮೊದಲನೆಯ ಭಾಷಣ ದೀರ್ಘವಾಗಿ ಪ್ರಸ್ತಾಪಿಸುತ್ತದೆ. ಎರಡನೆಯದು, ಇನ್ನೊಂದು ಬಹಳ ಮುಖ್ಯವಾದ ಸಮಸ್ಯೆಯನ್ನು ಎತ್ತಿಕೊಂಡಿದೆ. ಸಿಡಿಮದ್ದಿಗೆ ಕಿಡಿತಾಗಿದಾಗ, ಅಂದರೆ ಕಲ್ಯಾಣ ಕ್ರಾಂತಿಯ ಕೊನೆಯ ದಿನಗಳಲ್ಲಿ, ಬಸವಣ್ಣನ ಪಾತ್ರವೇನು? ಹರಳಯ್ಯ, ಮಧುವರಸರನ್ನು ಆನೆಯ ಕಾಲಿಗೆ ಕೊಟ್ಟು ಸಂಗಮಕ್ಕೆ ಓಡಿ ಹೋದನೆ? ಬಿಜ್ಜಳನ ಕೊಲೆಗೆ ಕಾರಣನಾದನೆ ? ವಾಸ್ತವವಾಗಿ ಆಗ ನಡೆದದ್ದೇನು ? ಇದನ್ನು ಅಂದಿನ ರಾಜಕೀಯ ಪರಿಸರದ ಹಿನ್ನೆಲೆಯಲ್ಲಿ ಪುನರ್‌ನಿರ್ಮಿಸಲು ಪ್ರಯತ್ನಿಸಿದ್ದೇನೆ."[೧] ಎಂದು ಲೇಖಕರು ತಮ್ಮ ಕೃತಿ ಕುರಿತು ಹೇಳಿಕೊಂಡಿದ್ದಾರೆ.

ಇದರಲ್ಲಿ 'ಬೆಳಕಿನಡಿಯಲ್ಲಿ ಬೆಂಕಿ', 'ಸಿಡಿಮದ್ದಿಗೆ ಕಿಡಿ', ಮತ್ತು 'ಅಳಿವಿನಿಂದ ಉಳಿವಿಗೆ' ಎಂಬ ಮೂರು ವಿಭಾಗಗಳಿವೆ.

## ಕಲ್ಯಾಣ ಕ್ರಾಂತಿಗೆ ಮುನ್ನ

ಕ್ರಾಂತಿ ಎಂದ ತಕ್ಷಣ ೧೭೮೯ ರಲ್ಲಿ ಜರುಗಿದ ಫ್ರಾನ್ಸ್ ಮಹಾಕ್ರಾಂತಿ ಮತ್ತು ೧೯೧೭ ರಲ್ಲಿ ಜರುಗಿದ ರಷ್ಯಾ ಕ್ರಾಂತಿಯ ಬಗೆಗೆ ಇತಿಹಾಸಕಾರರು ಉಲ್ಲೇಖಿಸುತ್ತಾರೆ. ಫ್ರಾನ್ಸಿನಲ್ಲಿ ನಡೆಯುತ್ತಿದ್ದ ರಾಜ್ಯಾಡಳಿತದ ದುರ್ವರ್ತನೆಯನ್ನು ಹೋಗಲಾಡಿಸುವುದು ಪ್ರಜೆಗಳಿಗೆ ಅಗತ್ಯವಾಗಿತ್ತು ಹಾಗೆ ರಷ್ಯಾ ಕ್ರಾಂತಿ ಆರ್ಥಿಕ

ಸಮಾನತೆಗಾಗಿ ಮತ್ತು ಪಾಳೇಗಾರಿಕೆ ಮತ್ತು ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ನಡೆದ ಹೋರಾಟವಾಗಿದೆ. ಈ ಹೋರಾಟದಿಂದ ಜಾಗತಿಕವಾಗಿ ಸಾಮಾಜಿಕ ಪರಿವರ್ತನೆಗೆ ಚಾಲನೆ ನೀಡಲು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಸಹಕಾರಿಯಾಯಿತು ಎಂದು ಲೇಖಕರು ಅಭಿಪ್ರಾಯಿಸಿದ್ದಾರೆ. 'ಶೇಖರಗೊಳ್ಳುತ್ತಾ ಹೋದ ಹಲವಾರು ಅನ್ಯಾಯಗಳ ಪರ್ಯಾಪ್ತ ಸ್ಥಿತಿಯ ಪರಿಣಾಮವೇ ಕ್ರಾಂತಿ' ಎಂಬ ವಿಲ್ ಡ್ಯೂರಾಂಟನ ವ್ಯಾಖ್ಯೆಯನ್ನು ಉಲ್ಲೇಖಿಸಿ; ಇದರಂತೆಯೇ ಕಲ್ಯಾಣದಲ್ಲಿ ನಡೆದ ಕ್ರಾಂತಿಯೂ ಕೂಡಾ ಶತಮಾನದ ದೌರ್ಜನ್ಯದ ವಿರುದ್ಧದ ತಾತ್ವಿಕ ಪ್ರತಿಕ್ರಿಯೆಯಾಗಿದೆ. ಕ್ರಾಂತಿ ಎಂದರೆ ರಕ್ತಕ್ರಾಂತಿ ಎಂದೇ ವ್ಯಾಖ್ಯಾನಿಸುವುದನ್ನು ಲೇಖಕರು ಖಂಡಿಸಿ; "ಕ್ರಾಂತಿಯ ಮುಖ್ಯವಾದ ಗುರಿಯೆಂದರೆ, ಸಮಾಜದ ಸರ್ವಾಂಗೀಣ ಪ್ರಗತಿಗೆ ಕಾರಣವಾಗುವಂತಹ ಪರಿಸರ ನಿರ್ಮಾಣ ಕಾರ್ಯದಲ್ಲಿ ದಿಟ್ಟತನದಿಂದ, ಏಕೈಕ ನಿಷ್ಠೆಯಿಂದ ಮುನ್ನುಗ್ಗುವುದು. ಅದು ಹಿಂಸೆಯಿಂದಲೇ ಆಗಬೇಕೆಂದಿಲ್ಲ. ಅಹಿಂಸೆಯೂ ಮಹಾಕ್ರಾಂತಿಯ ಪ್ರಬಲ ಮಾಧ್ಯಮವಾಗಬಲ್ಲುದೆಂಬುದನ್ನು ಗಾಂಧೀಜಿ ಸಾಧಿಸಿ ತೋರಿಸಿದರು."[೨] ಹೀಗೆ ಶರಣರದ್ದೂ ಕೂಡಾ ಹಿಂಸಾತ್ಮಕವಾದ ಕ್ರಾಂತಿ ಮಾರ್ಗವಾಗಿರಲಿಲ್ಲ. ಜನಸಾಮಾನ್ಯರನ್ನು, ದೀನ ದಲಿತರನ್ನು, ಶೋಷಿತರನ್ನು ಅಪ್ಪಿಕೊಂಡು ಮೇಲೆತ್ತುವ ಮಾನವೀಯ ಕೆಲಸ ಮಾಡುವುದು ಬಸವಣ್ಣನವರ ಆಶಯವಾಗಿತ್ತು. ಇದರ ಜೊತೆಗೆ "ವಚನಕಾರರು ಮಾಡಿದ ಮಹತ್ವದ ಕೆಲಸವೆಂದರೆ, ವರ್ಣ ಸಮಾಜದ ಮೇಲ್ತುದಿಯಲ್ಲಿರುವವರ 'ಶ್ರೇಷ್ಠತ್ವ'ವನ್ನೂ ಕೆಳಹಂತದಲ್ಲಿರುವ ಅಸ್ಪೃಶ್ಯರ 'ಕನಿಷ್ಠತ್ವ'ವನ್ನೂ ಒಂದೇ ಏಟಿಗೆ ನಿರಾಕರಿಸಿದ್ದು."[೩] ಹೀಗೆ ವೈಚಾರಿಕ ನಿಲುವುಗಳ ಮೂಲಕ ಮೊದಲಿಗೆ ತನ್ನ ಹುಟ್ಟಿನ ಅಹಂಕಾರವನ್ನು ಬಸವಣ್ಣನವರು ಸ್ವತಃ ಕಳೆದುಕೊಂಡು ನಂತರ ತಳಸಮುದಾಯದವರನ್ನು ಒಗ್ಗೂಡಿಸುತ್ತಾರೆ. ಅವರಲ್ಲಿ ನಂಬಿಕೆಯನ್ನು ಹುಟ್ಟು ಹಾಕಿ ತದನಂತರದಲ್ಲಿ ಸಮಾನತೆಯ ಪ್ರಕ್ರಿಯೆಗೆ ಕೈ ಹಾಕುತ್ತಾರೆ.

೧೨ನೇ ಶತಮಾನದ ಸಂದರ್ಭದಲ್ಲಿ ಆಚರಣೆಯಲ್ಲಿದ್ದ ಸಾಮಾಜಿಕ ವಿಷಮತೆಗಳಾದ ವರ್ಣಾಶ್ರಮ ಪದ್ಧತಿಯನ್ನು ರಾಜವಂಶಗಳು ಪೋಷಿಸಿಕೊಂಡು ಬಂದ ಕಾರಣದಿಂದ ಜಾತೀಯತೆ ನಿರಂತರವಾಗಿ ಬೆಳೆದುಕೊಂಡು ಬಂದಿತು. ಆರಂಭಿಕ ಹಂತದಲ್ಲಿ ಅರ್ಹತೆಯನ್ನು ಆಧಾರವಾಗಿಟ್ಟುಕೊಂಡು ಮೂಡಿ ಬಂದ ಚಾತುರ್ವರ್ಣ ಪದ್ಧತಿ ನಂತರದಲ್ಲಿ ಕರ್ಮಸಿದ್ಧಾಂತ ಮತ್ತು ಧರ್ಮಶಾಸ್ತ್ರಗಳ ಪರಿಣಾಮದಿಂದ ಎಲ್ಲರೂ ಅವರವರ ಕರ್ಮದಿಂದ ಜನಿಸುತ್ತಾರೆ. ಆ ಕಾರಣದಿಂದ ಮೇಲು–ಕೀಳು ಸೃಷ್ಟಿಯಾಗಿದೆ ಎಂದು ಜನಸಾಮಾನ್ಯರಲ್ಲಿ ಬಿತ್ತಲಾಯಿತು. ಜನಸಾಮಾನ್ಯರನ್ನು ಧಾರ್ಮಿಕ ಚೌಕಟ್ಟಿನಲ್ಲಿ ಬಂಧಿಸಿ; ಅವರು ಪ್ರಶ್ನೆ ಮಾಡದಂತೆ ನೋಡಿಕೊಳ್ಳಲಾಯಿತು. ಚಾತುರ್ವರ್ಣ ಪದ್ಧತಿಯಿಂದ ಶೂದ್ರ ವರ್ಗವು ಹೀನಾಯವಾಗಿ ಬದುಕುವಂತಾಯಿತು. ದುಡಿತದಲ್ಲಿಯೇ ತನ್ನ ಜೀವನವನ್ನು ಪರರಿಗಾಗಿಯೇ ಸವೆಸುವ ಪರಿಸ್ಥಿತಿ ಅವರಿಗಿದ್ದಿತು. ಇದಲ್ಲದೇ ಹೋಮ–ಹವನಗಳಂತಹ ಚಟುವಟಿಕೆಯಲ್ಲಿ ಪ್ರಾಣಿ ಬಲಿ ನೀಡಲಾಗುತ್ತಿತ್ತು, ಯಾಗಗಳಿಗೆ ಪ್ರಾಣಿಗಳನ್ನು ಬಲಿಕೊಡಲಾಗುತ್ತಿತ್ತು. ತಳ ಸಮುದಾಯದವರೆನ್ನಿಸಿಕೊಂಡವರೂ ಸಹಾ ಮೇಲ್ವರ್ಗದವರ ದೌರ್ಜನ್ಯದ ಜೊತೆಗೆ ತಮ್ಮದೇ ಸಂಪ್ರದಾಯದ ಮೌಢ್ಯದ ಕೂಪದಲ್ಲಿ ಸಿಲುಕಿ; ಮಾರಿ, ಮಸಣಿ ಪೂಜೆಗಾಗಿ ಪ್ರಾಣಿ ಬಲಿಯನ್ನು ನೀಡುತ್ತಿದ್ದರು. ಈ ಎರಡೂ ವರ್ಗಗಳ ಮೌಢ್ಯದ ಆಚರಣೆಗಳಿಂದ ಸಾಮಾಜಿಕ ಸ್ಥಿತಿಯು ವಿಷಮತೆಯನ್ನು ತಲುಪಿತ್ತು. ಇದನ್ನು ಸರಿಮಾಡುವ ಗುರುತರವಾದ ಜವಾಬ್ದಾರಿ ವಚನ ಚಳುವಳಿಯ ನೇತಾರರಾದ ಬಸವಣ್ಣನವರ ಮೇಲಿದ್ದಿತು. ಎಲ್ಲಕ್ಕಿಂತ ಮುಖ್ಯವಾಗಿ ಜಾತೀಯತೆ ಎಂಬುದು ಸಮಾಜವನ್ನು ಬಹಳವಾಗಿ ಬಾಧಿಸಿತ್ತು. "ಬ್ರಾಹ್ಮಣ, ಕ್ಷತ್ರಿಯ, ವೈಶ್ಯರ ಮಟ್ಟಿಗೆ ವರ್ಣಗಳೇ ಜಾತಿಗಳಾದರೂ, ಶೂದ್ರರಲ್ಲಿ ಹಲವಾರು ಜಾತಿಗಳು ಉಂಟಾಗಿದ್ದವು. ಅವರೂ ದ್ವಿಜರನ್ನು ಅನುಕರಿಸುತ್ತಾ ಜಾತಿ ತಾರತಮ್ಯದಲ್ಲಿ ತೊಡಗಿದ್ದರು, ಹೇಗೂ ತಾವೆಲ್ಲ ಮೊದಲ ಮೂರು ವರ್ಗಗಳಿಂದ ಕೀಳೆಂದೇ ನಂಬಿದ್ದರು. ಹೀಗೆ ಕೆಳಸ್ತರದವರಲ್ಲಿದ್ದ ದೈನ್ಯವು ಜಾತಿಕಾರಣದಿಂದ ಬಂದದ್ದು. ವಚನಕಾರರು ಇಂತಹ ಜಾತಿ ವ್ಯವಸ್ಥೆಯನ್ನು ಸಂಪೂರ್ಣವಾಗಿ ಅಲ್ಲಗಳೆದರು."[೪] ಎಂದು ಜಿ.ವಿ. ನಾರಾಯಣ ಅವರು ಅಭಿಪ್ರಾಯಿಸುತ್ತಾರೆ. ಶರಣರಿಗೆ ಸಂಪ್ರದಾಯದ ಬೇಲಿಯ ಒಳಗೆ ಸಿಲುಕಿದ್ದ ಜನಸಾಮಾನ್ಯರನ್ನು ಸರಿದಾರಿಗೆ ತರುವುದು ಕಷ್ಟಕರವಾಗಿದ್ದರೂ ಸಮಾಜದ ಸ್ವಾಸ್ಥ್ಯಕ್ಕಾಗಿ ಶರಣರು ಎಂತಹದ್ದೇ ತ್ಯಾಗಕ್ಕೂ ಸಿದ್ಧರಾಗಿದ್ದರು ಎಂಬುದು ಕಲ್ಯಾಣಕ್ರಾಂತಿಯಂತಹ ಸಂಗತಿಯನ್ನು ನೋಡಿದಾಗ ಮನವರಿಕೆಯಾಗುತ್ತದೆ.

ಸಮಾಜದಲ್ಲಿ ಅಸ್ತಿತ್ವದಲ್ಲಿದ್ದ ಸಾಮಾಜಿಕ ಮತ್ತು ಧಾರ್ಮಿಕ ಅಂಧಶ್ರದ್ಧೆಗಳನ್ನು ಕುರಿತು ವ್ಯಕ್ತವಾದ ತಾತ್ವಿಕ ವಿರೋಧಗಳ ಬಗ್ಗೆ ಲೇಖಕರು ವಿವೇಚಿಸಿದ್ದಾರೆ. ಮೊದಲಿಗೆ ಬುದ್ಧನು ಯಜ್ಞ ಪ್ರಕ್ರಿಯೆಗಳಲ್ಲಿ ನಡೆಯುತ್ತಿದ್ದ ಪ್ರಾಣಿ ಹಿಂಸೆಯನ್ನು ಖಂಡಿಸಿ, ಅಹಿಂಸಾವಾದವನ್ನು ಪ್ರತಿಪಾದಿಸುತ್ತಾನೆ, ಅಖಂಡ ಭಾರತದಾದ್ಯಂತ ಜನಸಾಮಾನ್ಯರನ್ನು ಪರಿವರ್ತಿಸುತ್ತಾ ಬೌದ್ಧ ಧರ್ಮದ ಮೌಲ್ಯಗಳನ್ನು ಬಿತ್ತಿದ್ದನು. ಕೊನೆಗೆ ಅದೇ ಧರ್ಮ ತನ್ನ ಅಸ್ತಿತ್ವಕ್ಕಾಗಿ ಹೋರಾಡುವ ಸ್ಥಿತಿ ನಿರ್ಮಾಣವಾಯಿತು. ಇದಕ್ಕೆ ಬೌದ್ಧ ಧರ್ಮಕ್ಕೆ ಎಲ್ಲೆಡೆ ಬೆಂಬಲ ಸಿಗದೆ ಇದ್ದುದರ ಜೊತೆಗೆ ವೈದಿಕ ಪರಂಪರೆಯು ಮತ್ತೆ ಮುನ್ನೆಲೆಗೆ ಬಂದುದು ಕಾರಣವಾಗಿದೆ. ೮ನೇ ಶತಮಾನದಲ್ಲಿ ಕಾಣಿಸಿಕೊಂಡ ತತ್ವಜ್ಞರೆನ್ನಿಸಿದ ಶಂಕರಾಚಾರ್ಯರು ಇಡೀ ಭಾರತದಾದ್ಯಂತ ಸಂಚರಿಸಿ ಅದ್ವೈತ ಸಿದ್ಧಾಂತವನ್ನು ಪ್ರತಿಪಾದಿಸಿ; ಶಿವತತ್ವವನ್ನು ಎಲ್ಲೆಡೆಯೂ ಪ್ರಚುರಪಡಿಸುತ್ತಾರಾದರೂ; "ಅತ್ಯಂತ ಕೆಳಗಿನ ಸ್ತರದಲ್ಲಿರುವವರಲ್ಲಿಯೂ ಶಿವತ್ವವಿದೆಯೆಂದು ಅದನ್ನ ಎಚ್ಚರಿಸುವ ಸಾಮಾಜಿಕ ಸಮತೆಯ ಸಾಹಸಕ್ಕೆ ಇವರು ಕೈ ಹಾಕಲಿಲ್ಲ."[೫] ಎಂದು ಶಂಕರಾಚಾರ್ಯರ ಮಿತಿಯನ್ನು ಸ್ವಾಮಿಯವರು ಗುರುತಿಸುತ್ತಾರೆ. ಇವರಂತೆಯೇ ಅಂದಿನ ಸಂದರ್ಭದಿಂದಲೂ ಸಮಾಜ ಸುಧಾರಕರೆನ್ನಿಸಿದ ರಾಮಾನುಜರು, ಮಧ್ವಾಚಾರ್ಯರು, ಮೀರಾ, ಚೈತನ್ಯ, ರಾಮದಾಸ್, ಕಬೀರ್ ಇವರೆಲ್ಲರೂ ಭಕ್ತಿ ಚಳುವಳಿಯನ್ನು ನಡೆಸುತ್ತಾರಾದರೂ ಜನಸಾಮಾನ್ಯರನ್ನು ಮೇಲೆತ್ತುವ ಕೈಂಕರ್ಯದಲ್ಲಿ ಸಂಪೂರ್ಣ ಯಶಸ್ವಿಯಾಗಲಿಲ್ಲವೆಂದು ಪ್ರಸ್ತಾಪಿಸಿ; ಹಲವಾರು ಶತಮಾನಗಳ ನಂತರ ಬಸವಣ್ಣನವರು ನಡೆಸಿದ ವಚನ ಚಳುವಳಿ ಸಾಮಾಜಿಕ ವಿಷಮತೆಯ ವಿರುದ್ಧ ಸಾರಿದ ವೈಚಾರಿಕ ಹೋರಾಟವೆಂದು ಸ್ವಾಮಿಯವರು ಪ್ರಬಲವಾಗಿ ಪ್ರತಿಪಾದಿಸುತ್ತಾರೆ.

೧೨ನೇ ಶತಮಾನ ಮೌಢ್ಯದಿಂದಲೂ, ಧಾರ್ಮಿಕ ಬಂಧನದಿಂದಲೂ ಕೂಡಿದ ಕಾಲವಾಗಿತ್ತು. ಇಂತಹ ಸಂದರ್ಭದಲ್ಲಿ "ಧರ್ಮಕ್ಕೆ ಆಧುನಿಕ ವೈಜ್ಞಾನಿಕ ವಿವೇಚನೆಯ ಹಿನ್ನೆಲೆಯನ್ನು ತಂದುಕೊಟ್ಟ ಮೊದಲಿಗ ಬಸವಣ್ಣ. 'ಧರ್ಮವಿಲ್ಲದ ವಿಜ್ಞಾನ ಕುರುಡು, ಅಂತೆಯೇ ವಿಜ್ಞಾನವಿಲ್ಲದ ಧರ್ಮ ಕುಂಟು' ಎಂದು ಐನ್‌ಸ್ಟೀನ್ ಈ ಯುಗದಲ್ಲಿ ಹೇಳಿದ ಮಾತಿನ ಸತ್ಯವನ್ನು ಬಸವಣ್ಣ ಅಂದೇ ಮನಗಂಡ ಆಧ್ಯಾತ್ಮ ವಿಜ್ಞಾನಿ. ಕುಂಟುತ್ತಿದ್ದ ಅಂದಿನ ಧರ್ಮಕ್ಕೆ ವೈಜ್ಞಾನಿಕ ಚೌಕಟ್ಟನ್ನು ಕೊಟ್ಟು ಅದು ಗಗನಗಾಮಿಯಾಗುವಂತೆ ಮಾಡಿದ. ಆದರೆ ಅದು ಅತಿಯಾದ ಬೌದ್ಧಿಕತೆಯಲ್ಲಿ ಮುಳುಗಿ, ಗಗನ ಕುಸುಮವಾಗದಂತೆ ವ್ಯಾವಹಾರಿಕ ಸತ್ವವನ್ನು ನೀಡಿದ. ಎಲ್ಲಕ್ಕಿಂತ ಹೆಚ್ಚಿನದೆಂದರೆ ಮಾನವತೆಯ

ಏಕತೆಯನ್ನು ಬೆಸೆಯುವ ಜೀವಂತ ಶಕ್ತಿಯಾಗಿ ಧರ್ಮವನ್ನು ಪರಿವರ್ತಿಸಿದುದು ಆ ಯುಗದಲ್ಲಿ ಧರ್ಮ, ಮಾನವರನ್ನು ಒಗ್ಗೂಡಿಸುವುದಕ್ಕೆ ಬದಲಾಗಿ ಸಮಾಜವನ್ನು ಹೋಳು–ಹೋಳಾಗಿ ವಿಭಜಿಸುವ ವಿಚ್ಛಿದ್ರಕಾರಕ ಶಕ್ತಿಯಾಗಿತ್ತು ಅದನ್ನು ಹೋಗಲಾಡಿಸಿ ಅದಕ್ಕೆ ಹೊಸ ಚೈತನ್ಯವನ್ನು ತುಂಬಿದ."[೬] ಎಂಬಂತಹ ಮಾತುಗಳು ಅಂದಿನ ಸಮಾಜದಲ್ಲಿ ಅಸ್ತಿತ್ವದಲ್ಲಿದ್ದ ಧಾರ್ಮಿಕ ಅಂಧಶ್ರದ್ಧೆಗಳನ್ನು ಹೋಗಲಾಡಿಸಲು ಬಸವಣ್ಣ ಎದುರಿಸಿದ ಸವಾಲುಗಳು ಮತ್ತು ಕಂಡುಕೊಂಡ ಮಾರ್ಗೋಪಾಯಗಳನ್ನು ತಿಳಿಸುತ್ತದೆ.

ಬಸವಣ್ಣನವರದ್ದು ಸ್ವಂತಕ್ಕಲ್ಲದ ಸಾಮಾಜಿಕ ಚಿಂತನೆಯ ಜೀವನವಾದ್ದರಿಂದ ಈ ರೀತಿಯ ಆಲೋಚನೆ ಮತ್ತು ಕಾರ್ಯವೈಖರಿ ಸಾಧ್ಯವಾಗುತ್ತದೆ. ಬಸವಣ್ಣನವರು ತಮಗಿದ್ದ ವರ್ಚಸ್ಸು ಮತ್ತು ಜನಬೆಂಬಲವನ್ನು ಬಳಸಿಕೊಂಡು ಸುಲಭವಾಗಿ ಚಕ್ರವರ್ತಿ ಪದವಿಗೇರಬಹುದಿತ್ತಾದರೂ; ಜೀವನದ ಸಾರ್ಥಕತೆಯಿರುವುದು ದೀನರನ್ನು, ದಲಿತರನ್ನು ಮೇಲೆತ್ತುವುದರಿಂದ ಎಂಬುದನ್ನು ಅರಿತು ಸಮಾನತೆಗಾಗಿ ಹೋರಾಡುತ್ತಾರೆ. "ವೈದಿಕರು ಆಚರಿಸುವ ಮನುಧರ್ಮದ ತಾಯಿಬೇರಾದ ಕರ್ಮಸಿದ್ಧಾಂತವನ್ನು ಬಸವಣ್ಣನವರು ಅಲ್ಲಗಳೆದು ಕಾಯಕಸಿದ್ಧಾಂತದ ಮೇಲೆ ಈ ಶರಣಸಂಕುಲದ ಪರಿಕಲ್ಪನೆಯನ್ನು ಕಾರ್ಯಗತಗೊಳಿಸಿದರು."[೭] ಎಂದು ರಂಜಾನ್ ದರ್ಗಾ ಅಭಿಪ್ರಾಯಿಸುತ್ತಾರೆ. ಧರ್ಮದ ಮುಷ್ಟಿಗೆ ಸಿಲುಕಿ ನಲುಗುತ್ತಿದ್ದ ಸಮಾಜಕ್ಕೆ ಮುಕ್ತಿ ನೀಡಿದವರು ಬಸವಣ್ಣ. ಬುದ್ಧನಂತೆ ವಿರಾಗಿಯಾಗದೆ, ತಪಕೆ ಹೋಗದೇ ವಾಸ್ತವ ಬದುಕಿನಲ್ಲಿದ್ದುಕೊಂಡೇ ಜನಸಾಮಾನ್ಯರನ್ನು ಮೇಲೆತ್ತಿದ ಬಸವಣ್ಣನವರನ್ನು ಅವತಾರದ ಪರಿಕಲ್ಪನೆಯಲ್ಲಿ ಪುರಾಣಗಳಲ್ಲಿ ಚಿತ್ರಿಸಿರುವುದು ಭಕ್ತಿಯ ಪರಾಕಾಷ್ಠೆಯಾಗುತ್ತದೆ. ಕ್ರಾಂತಿ ಮಾಡಬೇಕೆಂದು ಬಸವಣ್ಣ ಹೊರಡಲಿಲ್ಲ ನುಡಿದದ್ದೆಲ್ಲಾ ನಡೆಯಾಯಿತ್ತು, ಬಡವರ ನೋವಿಗೆ ಮನಸ್ಸು ಮಿಡಿಯಿತು. ಅದೇ ಅನುದಿನವೂ ನಡೆದು ಸಮಾನತೆಯೆಡೆಗೆ ಸಾಗುವುದೇ ಅವರ ಪರಮಗುರಿಯಾಯಿತು ಆ ನಂತರದಲ್ಲಿ ನಡೆದ ಘಟನೆಗಳೆಲ್ಲ ಕಲ್ಯಾಣ ಕ್ರಾಂತಿಗಾಗಿ ನಡೆದ ಪೂರ್ವ ಸಿದ್ಧತೆಯಂತೆಯೇ ಜರುಗಿತು.

ಬಸವಣ್ಣನವರು ಮತ್ತು ಗಾಂಧೀಜಿಯವರ ಚಿಂತನೆಗಳನ್ನು ಸ್ವಾಮಿಯವರು ತೌಲನಿಕವಾಗಿ ವಿವೇಚಿಸಿದ್ದಾರೆ. ಜಾತಿ ನಿರಾಕರಣೆಯ ವಿಚಾರದಲ್ಲಿ ಬಸವಣ್ಣನವರದ್ದು ಗಾಂಧೀಜಿಯವರ ನಿಲುವಿಗಿಂತ ಭಿನ್ನವಾದುದು ಮತ್ತು ಸುಧಾರಣಾ ನೀತಿ ಬಸವಣ್ಣನವರಲ್ಲಿ ಹೆಚ್ಚಾಗಿ ಕಾಣಿಸುತ್ತದೆ ಎನ್ನುತ್ತಾರೆ. ಗಾಂಧೀಜಿ ಅಸ್ಪೃಶ್ಯರನ್ನು ಹರಿಜನ ಎಂದು ಕರೆದರೆ; ವಿವೇಕಾನಂದರು ದರಿದ್ರನಾರಾಯಣ ಎಂದು ಕರೆಯುತ್ತಾರೆ. ಆದರೆ ಬಸವಣ್ಣ ಯಾವ ಹೆಸರಿನಿಂದಲೂ ಕರೆಯದೇ ಅವರೆಲ್ಲರನ್ನೂ ಕಾಯಕದಲ್ಲಿ ತೊಡಗಿಸಿ, ಹುಟ್ಟಿನ ಮೂಲದ ಮೈಲಿಗೆಯ ಚಿಂತನೆಯನ್ನು ಅವರ ಮನಸ್ಸಿನಿಂದ ಹೋಗಲಾಡಿಸಿ ಎಲ್ಲರಿಗೂ ಲಿಂಗದೀಕ್ಷೆ ನೀಡಿ ಶರಣರೆಂದು ಕರೆದು ಎಲ್ಲರನ್ನೂ ಅನುಭವ ಮಂಟಪದಲ್ಲಿ ಸೇರಿಸಿ ಸಮಾನ ವೇದಿಕೆ ನೀಡಿ ಚರ್ಚೆಗೆ ಮುಕ್ತವಾದ ಅವಕಾಶವನ್ನು ಮಾಡಿಕೊಟ್ಟಿದ್ದರು. ಈ ನಡೆಯು ಭಾರತೀಯ ಇತಿಹಾಸದಲ್ಲಿ ಯಾವುದೇ ದಾರ್ಶನಿಕನು ಅನುಸರಿಸದೇ ಬಸವಣ್ಣನವರು ನಡೆಸಿದರು ಎಂದು ಸ್ವಾಮಿಯವರು ಅಭಿಪ್ರಾಯಿಸುತ್ತಾರೆ. ಬಸವಣ್ಣನವರದ್ದು ನಿಜಕ್ಕೂ ಪ್ರಶಂಸನಾರ್ಹವಾದ ಕೈಂಕರ್ಯವೆಂದು ವ್ಯಾಖ್ಯಾನಿಸಬಹುದು. ಪ್ರಪಂಚದ ಇತಿಹಾಸದಲ್ಲಿಯೇ ಸಂಸತ್ ಮಾದರಿಯ ಪರಿಕಲ್ಪನೆಯನ್ನು ಪ್ರತಿಷ್ಠಾಪಿಸಿ ಅಲ್ಲೆಲ್ಲಾ ಜಾತಿ, ಲಿಂಗ ಸಮಾನತೆಯನ್ನು ಸಾರಿದುದು ಮಹತ್ವದ ಹೆಜ್ಜೆಯೇ ಆಗಿದೆ.

ಸ್ತ್ರೀ ವಿಚಾರ ಬಂದಾಗ 'ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ' ಎಂಬ ಮನುವಿನ ಮಾತು ಭಾರತದಾದ್ಯಂತ ಜನಜನಿತವಾಗಿ ಆಚರಣೆಯಲ್ಲಿತ್ತು. ಹೆಣ್ಣು ಶೋಷಣೆಯ ಕೂಪದಲ್ಲಿ ಸಿಲುಕಿ ಶತಮಾನಗಳಿಂದ ನರಳಿ ಹೋಗಿದ್ದಳು. ೧೨ನೇ ಶತಮಾನದಲ್ಲಿ ಸ್ತ್ರೀಯರಿಗೆ ಪುರುಷರಷ್ಟೇ ಸಮಾನ ಅವಕಾಶಗಳನ್ನು ನೀಡಲಾಗಿತ್ತು. ಗೌರವಯುತವಾದ ಸ್ಥಾನಮಾನದಿಂದ ಅವರನ್ನು ನಡೆಸಿಕೊಳ್ಳಲಾಗುತ್ತಿತ್ತು. ಇದಕ್ಕೆ ಅಕ್ಕಮಹಾದೇವಿ, ನೀಲಾಂಬಿಕೆ, ಗಂಗಾಂಬಿಕೆ, ಲಕ್ಕಮ್ಮ, ಮೋಳಿಗೆ ಮಹಾದೇವಿ, ಸತ್ಯಕ್ಕ ಇವರೇ ಮೊದಲಾದ ಶರಣರು ರಚಿಸಿದ ವಚನಗಳು ಮತ್ತು ಅವರ ಅಂದಿನ ಸಾಮಾಜಿಕ ಸಾಧನೆಗಳೇ ಶರಣರ ಉದಾರ ನೀತಿಯನ್ನು ತಿಳಿಸುತ್ತದೆ. 'ಮೊಲೆ ಮುಡಿ ಬಂದರೆ ಹೆಣ್ಣೆಂಬರು, ಗಡ್ಡ ಮೀಸೆ ಬಂದರೆ ಗಂಡೆಂಬರು, ನಡುವೆ ಸುಳಿವಾತ್ಮ ಗಂಡೂ ಅಲ್ಲ, ಹೆಣ್ಣೂ ಅಲ್ಲ' ಎಂದು ಹೇಳಿದ ಜೇಡರ ದಾಸಿಮಯ್ಯನ ವಚನ ಸ್ತ್ರೀ–ಪುರುಷ ಭೇದವನ್ನು ತೊಡೆದು ಹಾಕಿ ಎರಡನ್ನೂ ಶುದ್ಧಾತ್ಮರಾಗಿ ಕಂಡುದಕ್ಕೆ ಉತ್ತಮ ಉದಾಹರಣೆಯಾಗಿದೆ.

ದೇವರೆಂಬ ಸಂಗತಿ ಸಾಮಾನ್ಯರಿಗೆ ಅರ್ಥವಾಗದ ವಿಚಾರವಾಗಿತ್ತು. ದೇವರಿಗೂ ಭಕ್ತರಿಗೂ ನಡುವೆ ಮಧ್ಯವರ್ತಿಗಳಿದ್ದರು ಅವರು ಸಾಮಾನ್ಯರಿಗೆ ದೇವಾಲಯ ಪ್ರವೇಶವನ್ನು ನೀಡದೆ ಎಲ್ಲಾ ಧಾರ್ಮಿಕ ಚಟುವಟಿಕೆಗಳನ್ನು ತಮ್ಮ ಮುಷ್ಟಿಯಲ್ಲಿಯೇ ಇರಿಸಿಕೊಂಡಿದ್ದರು. ಶೋಷಣೆಯನ್ನು ನಿರಂತರವಾಗಿ ಮುಂದುವರಿಸಿದ್ದರು. ಇದನ್ನೆಲ್ಲಾ ಆಲೋಚಿಸಿದ ಬಸವಣ್ಣನವರು ಆಧ್ಯಾತ್ಮಿಕವಾಗಿಯೂ ಸಾಮಾನ್ಯರ ನೆರವಿಗೆ ನಿಲ್ಲುತ್ತಾರೆ. ಎಲ್ಲರಿಗೂ ಸಮಾನತೆಯ ಸಂಕೇತವಾದ ಇಷ್ಟಲಿಂಗವನ್ನು ನೀಡಿ; ತಮ್ಮ ದೈವವನ್ನು ತಾವೇ ಆರಾಧಿಸಿಕೊಂಡು ಮಧ್ಯವರ್ತಿ ಇಲ್ಲದಂತೆ ಸರಳವಾಗಿ ಪೂಜನೆಗೈಯಲು ಅವಕಾಶ ನೀಡಿದ್ದರು. ಅಂದಿನ ದಿನಮಾನಗಳಲ್ಲಿ ಧರ್ಮಗಳ ಪ್ರಾಬಲ್ಯ ಹೆಚ್ಚಾಗಿ ಇದ್ದುದರಿಂದ ಧರ್ಮ ಪ್ರಚಾರ ಎಲ್ಲೆಡೆ ವ್ಯಾಪಕವಾಗಿ ನಡೆದಿತ್ತು ಜೊತೆಗೆ ಭಕ್ತಿಯುಗವಾದ್ದರಿಂದ ಇಷ್ಟಲಿಂಗ ಎಂಬ ಮಾಧ್ಯಮವೂ ಎಲ್ಲರನ್ನು ಒಂದೆಡೆ ಸೇರಿಸಲು ಸಹಕಾರಿಯಾಯಿತು. ಈ ಮೂಲಕ ತಳವರ್ಗದವರ ಜೊತೆ ಬ್ರಾಹ್ಮಣರೆನ್ನಿಸಿದವರೂ ಇಷ್ಟಲಿಂಗ ದೀಕ್ಷೆಯನ್ನು ಪಡೆದುಕೊಳ್ಳುತ್ತಾರೆ. ಮಾದಾರ ಕುಲದವರಾದ ಹರಳಯ್ಯ, ಬ್ರಾಹ್ಮಣ ಕುಲದವರಾದ ಮಧುವರಸ ಲಿಂಗದೀಕ್ಷೆ ಪಡೆದು ಶರಣರಾಗಿ ಸಮಾನ ವೇದಿಕೆಯಲ್ಲಿ ಕುಳಿತುಕೊಳ್ಳುತ್ತಾರೆ. ಇದು ಅನುಭವ ಮಂಟಪದ ಸಂಕಲ್ಪದ ಫಲ ಎನ್ನಲಾಗಿದೆ.

ಶರಣರು ವಿಚಾರ ಮಂಡಿಸುವಲ್ಲಿಗೆ ಸೀಮಿತರಾಗದೇ ಸಮಾಜದಲ್ಲಿ ಎಲ್ಲರೂ ಸ್ವಾಸ್ಥ್ಯದಿಂದ ಬದುಕಬೇಕಾದರೆ ಅದಕ್ಕೆ ಕಾಯಕ ಎಂಬುದು ಬಹಳ ಮುಖ್ಯ. ಅದು ಸತ್ಯ, ಶುದ್ಧತೆಯಿಂದ ಕೂಡಿರಬೇಕೆಂಬ ಅರಿವನ್ನೂ ಎಲ್ಲರಲ್ಲಿಯೂ ಮೂಡಿಸುವಲ್ಲಿ ಶರಣ ಧರ್ಮ ಸಹಾಯಕವಾಗಿತ್ತು. ಆ ಮೂಲಕ ಆರ್ಥಿಕ ಚಿಂತನೆಯನ್ನು ಸಮಾಜದಲ್ಲಿ ಬಿತ್ತಿ ಹೆಸರಿಗೆ ತಕ್ಕಂತೆ ಕಲ್ಯಾಣ ರಾಜ್ಯವಾಗಿ ಪರಿಣಮಿಸಲು ಬಸವಣ್ಣ ಕಾರಣರಾಗಿದ್ದರು. ಅಂದಂದಿನ ಕಾಯಕ ಅಂದೇ ನಡೆಯಬೇಕು, ಮಿಗುತಾಯ ಸಮಾಜದ ಸತ್ಕಾರ್ಯಕ್ಕೆ ಸದ್ವಿನಿಯೋಗವಾಗಬೇಕು, ಆ ಮೂಲಕ ತ್ರಿವಿಧ ದಾಸೋಹ ನಡೆಸಬೇಕೆಂದು ಪ್ರತಿಪಾದಿಸುತ್ತಾರೆ. ಕಾಯಕದಲ್ಲಿ ಯಾವುದು ಮೇಲಲ್ಲ, ಯಾವುದೂ ಕೀಳಲ್ಲ ಎಂಬ ಅರಿವನ್ನು ಎಲ್ಲರಲ್ಲಿಯೂ ಬಸವಣ್ಣನವರು ಮೂಡಿಸಿದರು. ಧಾರ್ಮಿಕ ಸಾಧನೆಗಾಗಿ ಈ ಹಿಂದೆ ತಪಸ್ಸಿಗೆ ಕುಟುಂಬವನ್ನು ತೊರೆದು ಸಾಗಿದ ಸಂಗತಿಗಳನ್ನು ನೋಡುತ್ತೇವೆ. ಕಲ್ಯಾಣದ ಶರಣರು ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ ಎಂಬ ಸಂದೇಶವನ್ನು ಸಾರಿ, ಲೌಕಿಕದಲ್ಲಿದ್ದುಕೊಂಡು ಪಾರಮಾರ್ಥವನ್ನು ಸಾಧಿಸಬಹುದೆಂದು ತಿಳಿಸಿಕೊಟ್ಟರು.

ಈ ಮೇಲೆ ಉಲ್ಲೇಖಿಸಿದಂತೆ ಸಾಮಾಜಿಕ ಸಮಾನತೆಯೆಂಬುದು ತಾತ್ವಿಕ ವಿಚಾರವಾಗಿ ಉಳಿಯದೇ ಅನುಷ್ಠಾನಕ್ಕೆ ಬಂದಿತ್ತು. ಕಾಯಕ ಪ್ರಜ್ಞೆ, ಸರ್ವರ ಮೇಲೂ ಗೌರವ ಭಾವ, ಸತ್ಯ, ನಿಷ್ಠೆ, ಪ್ರಾಮಾಣಿಕತೆ, ತ್ರಿವಿಧ ದಾಸೋಹ, ಮೌಢ್ಯನಿರಾಕರಣೆ, ಸಮಾನತೆ, ಇಷ್ಟಲಿಂಗ ದೀಕ್ಷೆ, ಇಂತಿವೆಲ್ಲವೂ ಅನುದಿನವೂ ಹಲವು ಶರಣರ ನೇತೃತ್ವದಲ್ಲಿ ನಡೆದಿತ್ತು. ಇಂದಿಗೂ ಸಾಧ್ಯವಾಗದ ತಾತ್ವಿಕ ನಿಲುವುಗಳನ್ನು ಅಳವಡಿಸಿಕೊಂಡವರು ಶರಣರು. ಅವರು ಇನ್ನೂ ಮುಂದುವರಿದು ಜಾತಿಗಳನ್ನು ಮೀರಿ ನಡೆಸಿದ ಅಂತರ್ಜಾತಿ ವಿವಾಹ ಕಲ್ಯಾಣ ಕ್ರಾಂತಿಗೆ ಮುನ್ನುಡಿಯಾಯಿತು. ಇದಕ್ಕೆ ಅಂದಿನ ಸಾಮಾಜಿಕ ಪರಿಸ್ಥಿತಿಗಳೂ ಕಾರಣವಾಗಿದ್ದವು ಎಂಬ ಸಂಗತಿ ತಿಳಿಯುತ್ತದೆ.

**ಕಲ್ಯಾಣ ಕ್ರಾಂತಿಗೆ ಕಾರಣ**

ಸಂದಿಗ್ಧ ಸ್ಥಿತಿಯಲ್ಲಿಯೂ ಸಾಮಾಜಿಕವಾಗಿ ಸಮಾನತೆಯ ಹಾದಿಯಲ್ಲಿ ಸಾಗುವುದು ಶರಣರ ಉದ್ದೇಶವಾಗಿತ್ತು. ಭಾರತೀಯ ಇತಿಹಾಸದಲ್ಲಿ ಬುದ್ಧನ ನಂತರ ಬಸವಣ್ಣನವರೇ ಸಮಗ್ರವಾಗಿ ವೈಚಾರಿಕ ಕ್ರಾಂತಿಯನ್ನು ಮಾಡಿ ಜನರನ್ನು ಮೇಲೆತ್ತಿದವರು ಎಂದು ಸ್ವಾಮಿಯವರು ಅಭಿಪ್ರಾಯಿಸುತ್ತಾರೆ. ಅದಕ್ಕೆ ಕಾರಣಗಳೂ ಹಲವಾರಿವೆ. ಜಾತ್ಯತೀತತೆ, ಸಮಾನತೆ, ಸರಳತೆ, ಪ್ರೀತಿ, ನಂಬಿಕೆ, ಅನುಕಂಪೆ ಇವುಗಳೆ ಆಗಿವೆ. ಇದನ್ನು ತಮ್ಮ ಜೀವನಕ್ಕೆ ಅಳವಡಿಸಿಕೊಂಡ ನಾಯಕ ಬಸವಣ್ಣನವರು. ಈ ರೀತಿಯ ಸಾಮಾಜಿಕ ಚಿಂತಕರು ಭಾರತೀಯ ಇತಿಹಾಸದಲ್ಲಿ ದಾಖಲಾಗಿದ್ದಾರೆ. ಗಾಂಧೀಜಿಯವರು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಅಹಿಂಸಾ ಮಾರ್ಗದಲ್ಲಿ ಹೋರಾಡಿ ನಾಡಿಗೆ ಸ್ವಾತಂತ್ರ್ಯವನ್ನು ದೊರಕಿಸಿಕೊಟ್ಟರು. ದಲಿತರ ನೋವನ್ನು ಕಂಡು ಅವರ ನೋವಿಗೆ ಮರುಗಿ, ಹರಿಜನ ಎಂದು ಕರೆದು; ಮುಂದಿನ ಜನ್ಮದಲ್ಲಿ ಹರಿಜನನಾಗಿ ಹುಟ್ಟಬಯಸುತ್ತೇನೆ ಎನ್ನುತ್ತಾರೆ. ಆದರೆ ಬಸವಣ್ಣನವರು ಚೆನ್ನಯ್ಯ ಮತ್ತು ಕಕ್ಕಯ್ಯನ ಮನೆಯ ದಾಸಿಯ ಮಗನಾಗಿ ಹುಟ್ಟಿದೆ ಎಂದು ಹೇಳುತ್ತಾ ಹುಟ್ಟಿನ ಅಹಂಕಾರವನ್ನು ಕಳೆದುಕೊಳ್ಳುತ್ತಾ; ತಮ್ಮ ಹುಟ್ಟಿನ ಮೂಲವನ್ನು ತಳಸಮುದಾಯದವರೊಡನೆ ಸಮೀಕರಿಸಿಕೊಳ್ಳುತ್ತಾರೆ. ಈ ಕಾರಣಕ್ಕಾಗಿ ತಾತ್ವಿಕ ನಿಲುವುಗಳಲ್ಲಿ ಬಸವಣ್ಣನವರು ಗಾಂಧೀಜಿಯವರಿಗಿಂತಲೂ ದೂರದರ್ಶಿತ್ವವನ್ನು ಹೊಂದಿದ್ದರು ಎಂದು ಸ್ವಾಮಿಯವರು ಉಲ್ಲೇಖಿಸಿದ ಅಂಶಗಳು ಇಲ್ಲಿ ಗಮನಾರ್ಹವಾಗಿವೆ.

ಸಾಮಾಜಿಕ, ಆಧ್ಯಾತ್ಮಿಕ ಮತ್ತು ಆರ್ಥಿಕ ಚಿಂತನೆಯನ್ನಿರಿಸಿಕೊಂಡು ಸರ್ವರನ್ನೂ ಸಮಾನ ದೃಷ್ಟಿಯಿಂದ ಕಾಣಬೇಕೆಂದುಕೊಂಡು, ಧರ್ಮವೆಂಬುದು ಜನಸಾಮಾನ್ಯನ ಮನೆಯನ್ನು ಬೆಳಗಬೇಕು, ಆತನ ಕುಲಕ್ಕೆ ಅಂಟಿದ ಜಾತಿಯ ಅಂಧಕಾರವನ್ನು ಹೋಗಲಾಡಿಸಿ, ಆತನನ್ನು ಮುನ್ನೆಲೆಗೆ ತರಬೇಕು ಅದೇ ನಿಜವಾದ ಮಾನವೀಯ ಅಂತಃಕರಣ. ಕಾಯಕ ಯಾವುದೇ ಇರಲಿ ಅದರಲ್ಲಿ ನಿಷ್ಠೆ ಇರಬೇಕು. ಅಸಂಗ್ರಹ ತತ್ವವನ್ನು ಪಾಲಿಸಬೇಕು. ದಾಸೋಹದ ರೂಪದಲ್ಲಿ ಗುರು, ಲಿಂಗ, ಜಂಗಮಕ್ಕೆ ಮಿಗುತಾಯವನ್ನು ಎರೆಯಬೇಕು ಎಂದು ಪ್ರತಿಪಾದಿಸುತ್ತಾರೆ. ಬಸವಣ್ಣನವರ ಸಾಮಾಜಿಕ ಚಿಂತನೆಗೆ ಬೆಂಬಲವಾಗಿ ನಿಲ್ಲಲು ನಾಡಿನ ಮೂಲೆ ಮೂಲೆಯಿಂದ ಕಲ್ಯಾಣದತ್ತ ಶರಣರು ಆಗಮಿಸುತ್ತಾರೆ. ಸಂಪ್ರದಾಯದ ಜಡತ್ವವನ್ನು ಕಿತ್ತೊಗೆಯಲು ಮಂಡಿಸಿದ ವೈಚಾರಿಕತೆ, ವೈಭವದ ನುಡಿಯಾಗಿ ಉಳಿಯದೇ; ಜೀವನಕ್ಕೆ ಅನುಷ್ಠಾನಗೊಂಡ ಮೌಲ್ಯವಾಗಿ ಉಳಿಯಿತು. ನಿಂತ ನೀರಿನಂತಿದ್ದ ಜಾಢ್ಯಕ್ಕೆ ವೈಚಾರಿಕತೆಯ ಸ್ಪರ್ಶ ಸಿಕ್ಕಿ ಸಾಮಾಜಿಕ ಸ್ವಾಸ್ಥ್ಯ ಹದವಾಯಿತ್ತು. ಮತಿಯನ್ನು ಮೀರಿದ್ದ ಚಿಂತನೆ ಶರಣರದ್ದಾಗಿತ್ತು ಎಂದು ಸ್ವಾಮಿಯವರು ತಿಳಿಸಿದ್ದಾರೆ.

ಬಸವಣ್ಣನವರು ಕಲ್ಯಾಣದಲ್ಲಿ ಸ್ವತಂತ್ರ ದೃಷ್ಟಿಯಿಂದ ಆಲೋಚಿಸಿ; ಜನರನ್ನು ಮೇಲೆತ್ತುವ ಕಾರ್ಯಕ್ಕೆ ಕಾರಣ ಬಿಜ್ಜಳ ದೊರೆಯ ಸಹಕಾರ ಮನೋಭಾವ ಎಂಬ ಸಂಗತಿಯನ್ನು ಸ್ವಾಮಿಯವರು ಚರ್ಚಿಸುತ್ತಾರೆ. ಬಿಜ್ಜಳನ ಪ್ರಧಾನ ಮಂತ್ರಿಯಾಗಿ ಕಾಯಕ ಮಾಡುವುದರ ಜೊತೆಗೆ; ಜನಸಾಮಾನ್ಯರ ಏಳ್ಗೆಗಾಗಿ ದುಡಿಯುವ ಸಂಕಲ್ಪಕ್ಕೆ ಯಾವುದೇ ಅಡ್ಡಿ ಬಿಜ್ಜಳನಿಂದ ಬರದೆ ಇದ್ದುದರಿಂದ ವೈಚಾರಿಕ ಚಿಂತನೆ ಸಮಾಜದಲ್ಲಿ ಬೆಳೆಯಲು ಸಾಧ್ಯವಾಯಿತು. ದೊರೆಯ ಅಂತರಂಗದಲ್ಲಿ ಬಸವಣ್ಣನವರ ಬಗ್ಗೆ ಗೌರವ ಭಾವ ಇದ್ದ ಕಾರಣಕ್ಕಾಗಿ ಕಲ್ಯಾಣ ರಾಜ್ಯ ಸುಭಿಕ್ಷವಾಗಿದ್ದಿತು. ಸಾಮಾಜಿಕ ಚಟುವಟಿಕೆ ನಿರಂತರವಾಗಿ ನಡೆದಾಗ, ಜನಸಾಮಾನ್ಯರೆಲ್ಲ ಪ್ರಜ್ಞಾವಂತರಾಗಿ ತಮ್ಮ ಕಾಯಕದಲ್ಲಿ ಸಾರ್ಥಕತೆಯನ್ನು ಕಂಡುಕೊಂಡರು. ಎಲ್ಲರೂ ಸಮಾಜದಲ್ಲಿ ಸಮಾನರೇ ಎಂಬ ಭಾವನೆ ಹುಟ್ಟಿ ಹರಳಯ್ಯನವರ ಮಗ ಶೀಲವಂತನಿಗೂ ಮತ್ತು ಮಧುವರಸರ ಮಗಳು ಕಲಾವತಿಗೂ ಶರಣ ಸಂಪ್ರದಾಯದಂತೆ ವಿವಾಹವೇರ್ಪಡುವಂತೆ ಮಾಡುತ್ತದೆ. ಈ ಸಂಗತಿ ಕಲ್ಯಾಣದ ರಾಜ್ಯದಲ್ಲೆಲ್ಲ ಹರಡಿ, ಬಿಜ್ಜಳನ ತನಕ ತಲುಪುತ್ತದೆ. ಬಸವಾದಿ ಶರಣರಿಗೆ ಇದು ಪ್ರಮಾದದಂತೆ ತೋರದೆ ಸಮಾನತೆಯ ಹೆಜ್ಜೆ ಎಂದೇ ವ್ಯಾಖ್ಯಾನಿಸಿಕೊಳ್ಳುತ್ತಾರೆ ಮತ್ತು ಆ ಸಂಗತಿಯಿಂದ ಸಾರ್ಥಕತೆಯನ್ನು ಕಂಡುಕೊಂಡೆವು ಎಂದುಕೊಳ್ಳುತ್ತಾರೆ. ಹಾಗೆಯೇ ಆಧುನಿಕ ಸಂಶೋಧಕರು ಇವರ ನಡೆಯನ್ನು ಒಪ್ಪುತ್ತಾರೆ. "ಮನುಧರ್ಮದ ಪ್ರಕಾರ ಆ ಮದುವೆ ಧರ್ಮಬಾಹೀರ ಆಗಿತ್ತು. ಆದರೆ ಲಿಂಗವಂತ ಧರ್ಮದ ಪ್ರಕಾರ ಧರ್ಮಸಮ್ಮತವಾಗಿತ್ತು. ಮನುವಾದಿಗಳಿಗೆ ಅದು ಬ್ರಾಹ್ಮಣ ಕನ್ಯಾ ಮತ್ತು ಸಮಗಾರ ವರನ ಮಧ್ಯೆ ನಡೆಯುವ ಮದುವೆಯಾಗಿತ್ತು. ಶರಣ ಸಂಕುಲದ ಪ್ರಕಾರ ಅದು ಲಿಂಗವಂತರ ಮದುವೆಯಾಗಿತ್ತು."[೮] ಸಂಪ್ರದಾಯವಾದಿಗಳು ಬಿಜ್ಜಳನ ಬಳಿ ವರ್ಣಸಂಕರವಾಯಿತೆಂದು ದೂರನ್ನು ನೀಡಿದಾಗ ಬಿಜ್ಜಳ ಅದರ ವಿಚಾರಣೆಗೆ ಸಮಿತಿಯೊಂದನ್ನು ರಚಿಸುತ್ತಾನೆ. ಅದಕ್ಕೆ ಮಗನಾದ ಸೋವಿದೇವನನ್ನು ಅಧ್ಯಕ್ಷನನ್ನಾಗಿ ನೇಮಿಸಿ, ಚನ್ನಬಸವಣ್ಣನವರನ್ನು ದಂಡಾಧಿಕಾರಿಯನ್ನಾಗಿ ನಿಯಮಿಸಿದ್ದನು.

ಹರಳಯ್ಯ ಮಧುವರಸರನ್ನು ವಿಚಾರಣೆಗೆ ಕರೆಸಿದಾಗ ಆ ಶರಣರ ಉತ್ತರ ದಿಟ್ಟತನದಿಂದ ಕೂಡಿದುದಾಗಿತ್ತು. ಈ ಸನ್ನಿವೇಶದಲ್ಲಿ ಉದ್ರಿಕ್ತನಾದ ಸೋವಿದೇವ ಅವರಿಗೆ ಎಳೆಹೂಟೆ ಶಿಕ್ಷೆಯನ್ನು ವಿಧಿಸಿಬಿಡುತ್ತಾನೆ. ಈ ಘಟನೆ ಕಲ್ಯಾಣದ ಕ್ರಾಂತಿಗೆ ಕಾರಣವಾಗುತ್ತದೆ. ಬಿಜ್ಜಳನಿಗೆ ಮತ್ತು ಶರಣರಿಗೆ ವಿಷಯ ತಿಳಿದು ಎಲ್ಲರೂ ಗಾಬರಿಯಾಗಿ, ಅರಮನೆಯೆಡೆಗೆ ಸಾಗಿ ಬರುತ್ತಾರೆ. ಕಸಪಯ್ಯ ಮತ್ತು ಮಲ್ಲುಗಿ ಈ ಸನ್ನಿವೇಶದ ಲಾಭವನ್ನು ಪಡೆಯಲು ಹವಣಿಸಿ, ಪುರೋಹಿತಶಾಹಿಗಳನ್ನು ಶರಣರ ವಿರುದ್ಧ ಎತ್ತಿಕಟ್ಟಿದರು. ಬಿಜ್ಜಳ ಶರಣರೆಡೆಗೆ ಧಾವಿಸುತ್ತಿರಲು ದೀವಟಿಗೆ ಹಿಡಿದವರು ಶರಣರ ಮೇಲೆ ಪಂಜನ್ನು ಎಸೆದು ಅದೇ ಸಂದರ್ಭದಲ್ಲಿ ಬಿಜ್ಜಳನಿಗೆ ಇರಿಯುತ್ತಾರೆ. "ಬಿಜ್ಜಳ ಮಹಾರಾಜರ ಕೊಲೆ. ಮಹಾರಾಜರನ್ನು ಶರಣರು ಕೊಲೆ ಮಾಡಿದರು. ಜಗದೇವ ಮಲ್ಲಿಬೊಮ್ಮ ಕೊಲೆ ಮಾಡಿದರು."[೯] ಹೀಗೆ ಕೊಲೆಯ ಅಪವಾದವನ್ನು ಶರಣರ ಮೇಲೆ ಹೊರಿಸುತ್ತಾರೆ. ಸೋವಿದೇವನಿಗೆ ಸತ್ಯಾಂಶ ತಿಳಿದಿತ್ತು ಆದರೆ ಆತ ತನ್ನ ರಾಜ್ಯದ ರಕ್ಷಣೆಯ ಜವಾಬ್ದಾರಿಯ ಕಡೆ ಗಮನವಹಿಸಿದ. ಇತ್ತ ಚನ್ನಬಸವಣ್ಣನವರಿಗೂ ಈ ವಿಷಯ ತಿಳಿದಿದ್ದರೂ ನಾಡಿನಾದ್ಯಂತ ಕೊಲೆಯ ಅಪವಾದ ಶರಣರ ಮೇಲೆಯೇ ಬಂದುದ್ದರಿಂದ; ಶರಣರು ತಮ್ಮ ವಚನಗಳನ್ನು ರಕ್ಷಣೆ ಮಾಡಿಕೊಳ್ಳುವಲ್ಲಿ ಉದ್ಯುಕ್ತರಾದರು. ಶರಣರ ಮೇಲೆ ಕಲ್ಯಾಣದ ಸೈನ್ಯ ಮುಗಿಬೀಳುವ ಭಯದಿಂದಲೇ ಶರಣರೆಲ್ಲ ಅಲ್ಲಿಂದ ಬೇರೆ ಬೇರೆ ಭಾಗಗಳಿಗೆ ತಂಡ ತಂಡಗಳಲ್ಲಿ ತೆರಳಿ; ಅಲ್ಲಲ್ಲಿ ವಚನಗಳನ್ನು ರಕ್ಷಿಸುವ ಕಾರ್ಯದಲ್ಲಿ ಜಾಗೃತರಾಗಬೇಕೆಂಬ

ಸಂದೇಶ ಬಸವಣ್ಣನವರಿಂದ ಬಂದಿತ್ತು. ಈ ರೀತಿಯ ಕಥಾನಾತ್ಮಕ ಊಹೆಯನ್ನು ಕಲ್ಪಿಸಿಕೊಂಡು ಕ್ರಾಂತಿಗೆ ಕಾರಣವನ್ನು ಸ್ವಾಮಿಯವರು ಕಟ್ಟಿಕೊಟ್ಟಿದ್ದಾರೆ. ಕ್ರಾಂತಿ ನಡೆದದ್ದು ನಿಜ, ಶರಣರು ಚದುರಿದ್ದು ನಿಜ, ಸ್ಪೃಶ್ಯ, ಅಸ್ಪೃಶ್ಯ ಕಲ್ಪನೆಯ ಅಡಿಯಲ್ಲಿ ಘರ್ಷಣೆಗಳು ನಡೆದಿರುವುದು ನಿಜ ಆದರೆ, ಘಟನೆಗಳು ಹೀಗೆಯೇ ನಡೆಯಿತೆಂದು ಕರಾರುವಕ್ಕಾಗಿ ಹೇಳುವುದು ಕಥೆಯೋ ಕಾದಂಬರಿಯೋ ಆಗುತ್ತದೆಯೇ ಹೊರತು ಇತಿಹಾಸವಾಗಲಾರದು.

ಕಲ್ಯಾಣವು ಕ್ರಾಂತಿಯೆಡೆಗೆ ಸಾಗಲು ಬಸವಣ್ಣನವರೇ ಕಾರಣ; ಬಸವಣ್ಣನವರು ತಾವು ಅಂದುಕೊಂಡದ್ದನ್ನು ತಲುಪಲಾರದೇ ವಿಫಲವಾದರು ಎಂದು ಆರೋಪ ಮಾಡುವ ವರ್ಗಕ್ಕೆ ತಮ್ಮದೇ ಮಾತುಗಳಲ್ಲಿ ಸ್ವಾಮಿಯವರು ಪ್ರತಿಕ್ರಿಯಿಸಿದ್ದಾರೆ. "ಮೊದಲನೆಯದಾಗಿ ಬಸವಣ್ಣ ಏನನ್ನು ಸಾರಿದನೋ ಅದನ್ನು ಸಾಧಿಸಿ ತೋರಿಸಿದ. 'ಸರ್ವಸಮಾನತೆ' ಎಂದರೆ ಎಲ್ಲಾ ವ್ಯಕ್ತಿಗಳೂ ಬೌದ್ಧಿಕವಾಗಿ, ಮಾನಸಿಕವಾಗಿ ಸಂಸ್ಕಾರ ರೂಪದಿಂದಲೂ ಸಹ ಸರ್ವಸಮಾನರೆಂದು ಅರ್ಥವಲ್ಲ. ಎಲ್ಲರ ಬೆಳವಣಿಗೆಗೂ ಸಮಾಜದಲ್ಲಿ ಸಮಾನ ಅವಕಾಶಗಳಿರಬೇಕು, ಹುಟ್ಟೇ ಕಾರಣವಾಗಿ ಯಾರೂ ಅವಕಾಶಗಳಿಂದ ವಂಚಿತರಾಗಬಾರದು ಎನ್ನುವುದು ಆತನ ದೃಷ್ಟಿ."[೧೦] ಎಂದು ಹೇಳುತ್ತಾ ಸದ್ಗುಣ, ಸದಾಚಾರಗಳನ್ನು ಜನ ಅನುಸರಿಸದೆಯೇ ದುರ್ಮಾರ್ಗದಲ್ಲಿ ಸಾಗಿದರೆಂದ ಮಾತ್ರಕ್ಕೆ ಸದ್ಗುಣಕ್ಕೆ ಧಕ್ಕೆಯಾಗುವುದೇ ಹಾಗೆಯೇ ಜನರು ಸದಾಚಾರಗಳನ್ನು ಒಪ್ಪದೇ, ಆಚರಿಸದೇ ಉಳಿದ ಕಾರಣಕ್ಕಾಗಿ ಶರಣರ ಚಳುವಳಿಯನ್ನು ಟೀಕಿಸಲಾದೀತೆ ಎಂದು ಬಸವಣ್ಣನವರ ನಡೆಯನ್ನು ಪ್ರಶಂಸಿಸಿ ಒಪ್ಪುತ್ತಾರೆ.

**ಅಳಿವಿನಿಂದ ಉಳಿವಿಗೆ**

ಕಲ್ಯಾಣ ಕ್ರಾಂತಿ ಜರುಗಿದ ನಂತರ ವಚನ ಸಾಹಿತ್ಯದ ಆಸ್ತಿತ್ವದ ಉಳಿವಿಗಾಗಿ ಶರಣರು ಕೈಗೊಂಡ ತೀರ್ಮಾನದ ಸಂದರ್ಭ ಬಹಳ ಮುಖ್ಯವಾದುದು. ಅವರು ಅಂದು ತಾಳಿದ ನಿಲುವಿನ ಕಾರಣದಿಂದ ಶರಣ ಸಾಹಿತ್ಯ ಇಂದಿನ ಪೀಳಿಗೆಗೆ ಉಳಿಯುವಂತಾಯಿತು. ಹರಳಯ್ಯ ಮಧುವರಸರ ಹತ್ಯೆ ಮತ್ತು ಬಿಜ್ಜಳನ ಕೊಲೆಯಂತಹ ಸಂಗತಿ ಶಾಂತಿ ಪ್ರಿಯರಾದ ದಯವೇ ಧರ್ಮದ ಮೂಲವೆಂದು ಪ್ರತಿಪಾದಿಸಿದ ಶರಣರ ಮನಸ್ಸಿನ ಮೇಲೆ ಗಾಢವಾದ ಪರಿಣಾಮವನ್ನು ಉಂಟು ಮಾಡಿತು. ಅವರೀರ್ವರ ಕೊಲೆಗೆ ಕಾರಣಗಳು ತಿಳಿದಿದ್ದಾಗಿಯೂ ಬಿಜ್ಜಳನ ಕೊಲೆಯ ಆಪಾದನೆಯನ್ನು ಶರಣರೇ ಹೊರಬೇಕಾಯಿತು. ಮುಂದೆ ಕಲಚೂರಿ ಸೇನೆಯ ದಂಡನಾಯಕನಾದ ಮಾಧವನು ಶರಣರ ಮೇಲೆ ಧಾಳಿ ಮಾಡಬಹುದೆಂಬ ಸೂಚನೆಯನ್ನು ಅರಿತು, ಮಹಾಮನೆಯಲ್ಲಿ ಚನ್ನಬಸವಣ್ಣ, ಅಕ್ಕನಾಗಮ್ಮ, ಗಂಗಾಂಬಿಕೆ, ನೀಲಾಂಬಿಕೆ, ಸೊಡ್ಡಳ ಬಾಚರಸ, ಶಿವಲೆಂಕ ಮಂಚಣ್ಣ, ಡೋಹರ ಕಕ್ಕಯ್ಯ, ಅಂಬಿಗರ ಚೌಡಯ್ಯ, ಮಡಿವಾಳ ಮಾಚಯ್ಯ, ಘಟ್ಟಿವಾಳಯ್ಯ, ಧೂಳಯ್ಯ, ನಾಗಯ್ಯ ಮೊದಲಾದ ಶರಣರು ಸೇರಿ ಮುಂದಿನ ನಿರ್ಧಾರಕ್ಕಾಗಿ ಕಾಯುತ್ತಿದ್ದರು. ಸಿದ್ಧರಾಮನು ಸೊನ್ನಲಿಗೆಯಿಂದ ಆಗಮಿಸಿ ನಿರ್ಧಾರ ಕೈಗೊಳ್ಳಲು ನೆರವಾಗುತ್ತಾನೆ. ಸಕಲೇಶ ಮಾದರಸರ ತಂಡ ಆಂಧ್ರದೆಡೆಗೆ ಸಾಗಿ ಆಲ್ಲಿ ಕಾಕತೀಯರ ಆಶ್ರಯದಲ್ಲಿ ವಚನಗಳನ್ನು ಪಸರಿಸಲು ಸಾಧ್ಯವಾಯಿತು. ೧೩ನೇ ಶತಮಾನದಿಂದಲೇ ಅಲ್ಲಿ ವಚನ ಪ್ರಚಾರ ಆರಂಭವಾಯಿತು.

ಬಸವಣ್ಣನವರನ್ನು ಕುರಿತು ಮೊದಲ ಜೀವನ ಚರಿತ್ರೆ 'ಬಸವ ಪುರಾಣ' ಎಂಬ ಹೆಸರಿನಲ್ಲಿ ತೆಲುಗಿನ ಪಾಲ್ಕುರಿಕೆ ಸೋಮನಾಥನಿಂದ ರಚಿತವಾಯಿತು. ಹರಿಹರನ ಬಸವರಾಜದೇವರ ರಗಳೆ ಕನ್ನಡದಲ್ಲಿ ಬಸವಣ್ಣನವರನ್ನು ಕುರಿತ ಮೊದಲ ಕೃತಿಯಾಗಿದೆ. ನಂತರದಲ್ಲಿ ಶರಣರೆಲ್ಲ ಸೊನ್ನಲಿಗೆಗೆ ನಡೆದು ಅಲ್ಲಿಂದ ಬಸವಣ್ಣನವರ ಸಂದೇಶ ಹಡಪದ ಅಪ್ಪಣ್ಣನವರಿಂದ ಬಂದ ನಂತರವೇ ಎಲ್ಲರೂ ರಾಜ್ಯದ ಮೂಲೆ ಮೂಲೆಗೆ ತೆರಳುತ್ತಾರೆ. ಶರಣರ ತ್ಯಾಗದ ಫಲದಿಂದ ಮತ್ತು ಅಧುನಿಕ ಯುಗದಲ್ಲಿ ಕೆಲವು ಸಂಶೋಧಕರು ಕೈಗೊಂಡ ಶ್ರಮದಿಂದ ನಮಗೆ ವಚನಗಳು ಲಭಿಸುವಂತಾಯಿತು ಎಂದು ಸ್ವಾಮಿಯವರು ಪ್ರಶಂಸಿಸುತ್ತಾರೆ. "ಇಂದು ವಚನ ಸಾಹಿತ್ಯ ಸಿಕ್ಕದೇ ಹೋಗಿದ್ದರೆ ಸಮಷ್ಟಿ ಸಾಧನೆಯೊಂದರಿಂದ ನಾವು ವಂಚಿತರಾಗುತಿದ್ದೆವು. ಬಸವಣ್ಣನ ವಚನಗಳು ಸಿಕ್ಕದೇ ಹೋಗಿದ್ದರೆ ಪುರಾಣಗಳ ಹುದುಲಿನಲ್ಲಿ ಆತನು ಅಡಗಿಹೋಗುತ್ತಿದ್ದ, ಅಲ್ಲಮನ ವಚನಗಳ ಹಾಸುಬೀಸುಗಳ ಅನುಭವಗಳಿಲ್ಲದೆ ಸಾಹಿತ್ಯ ಜಗತ್ತು ಬಡವಾಗುತ್ತಿತ್ತು; ಅಕ್ಕಮಹಾದೇವಿಯ ಕರುಳಿನ ಕರೆ ಮರೆಯಾಗುತ್ತಿತ್ತು. ಅಷ್ಟೇ ಅಲ್ಲದೇ ಚೌಡಯ್ಯ, ಧೂಳಯ್ಯ, ಕಕ್ಕಯ್ಯ ಮೊದಲಾದವರ ವಚನಗಳು ಸಿಕ್ಕದೇ ಹೋಗಿದ್ದರೆ ಕರ್ನಾಟಕದಲ್ಲಿ ೧೨ನೇ ಶತಮಾನದಲ್ಲಿಯೇ ನಡೆದುಹೋದ ದಲಿತ ಕ್ರಾಂತಿಯ ಮಹತ್ಸಾಧನೆ ಅಲಿಖಿತವಾಗಿ ಹೋಗುತ್ತಿತ್ತು. ಶರಣರು ಅಂದಿನ ಪ್ರತಿಕೂಲ ಪರಿಸರದಲ್ಲಿಯೂ ಈ ಸಾಹಿತ್ಯವನ್ನು ಉಳಿಸಿ ಅಪೂರ್ವ ಅನುಭವದ ನಿಧಿಯೊಂದನ್ನು ಮಾನವ ಜನಾಂಗಕ್ಕೆ ಉಳಿಸಿಹೋದರು. ಅದರಲ್ಲಿಯೂ ಎಷ್ಟೋ ನಾಶವಾಗಿ ಇಷ್ಟಾದರೂ ಉಳಿದು ಬಂದಿರುವುದು ಅವರ ಪ್ರಯತ್ನದ ಫಲವೆಂದು ಹೇಳಬೇಕು."[೧೧] ಈ ಮಾತುಗಳು ವಚನ ಸಾಹಿತ್ಯ ಸಂಶೋಧಕರಾದ ಫ.ಗು. ಹಳಕಟ್ಟಿಯವರನ್ನು ಕುರಿತು ಹೇಳಿದುದಾಗಿದೆ. ಆರಂಭಿಕ ಸಂದರ್ಭದಲ್ಲಿ ವಚನಗಳನ್ನು ಅಚ್ಚು ಹಾಕಿಸುವಲ್ಲಿ ಇನ್ನೂ ಅನೇಕರು ತಮ್ಮ ಅಮೂಲ್ಯವಾದ ಸೇವೆಯನ್ನು ಮಾಡಿದ್ದಾರೆ.

ಬಸವಣ್ಣನವರ ಐಕ್ಯದ ವಿಚಾರದ ಬಗೆಗೆ ವಿಶೇಷ ಗಮನ ವಹಿಸುವ ಪ್ರಯತ್ನವನ್ನು ಸ್ವಾಮಿಯವರು ಇದರಲ್ಲಿ ಮಾಡಿದ್ದಾರೆ. ಬಸವಣ್ಣನವರು ಕಲ್ಯಾಣ ಕ್ರಾಂತಿಯ ನಂತರ ಸಂಗಮವನ್ನು ತಲುಪಿ ಅಂತ್ಯಕಂಡ ಸಂಗತಿಗಳನ್ನು ಕುರಿತು ಅವರು ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂಬಂತೆ ಹುಟ್ಟಿಕೊಂಡಿರುವ ಅಭಿಪ್ರಾಯಗಳನ್ನು ಕುರಿತು ಮಾತನಾಡುತ್ತಾ, ಬಸವಣ್ಣನವರು ಸಾಂಪ್ರದಾಯಿಕ ವ್ಯವಸ್ಥೆಗೆ ಭಯಪಡುವವರಾಗಿದ್ದರೆ; ನೊಂದವರು, ದೀನ ದಲಿತರನ್ನು ಒಂದೆಡೆ ಸೇರಿಸಿ, ಅನುಭವ ಮಂಟಪವನ್ನು ನಿರ್ಮಿಸಿ ಅವರೆಲ್ಲರಿಗೂ ಇಷ್ಟಲಿಂಗ ದೀಕ್ಷೆ ನೀಡಿ ಶರಣ ಧರ್ಮವನ್ನು ಸ್ಥಾಪಿಸುವ ಪ್ರಮೇಯಕ್ಕೆ ಬರುತ್ತಿರಲಿಲ್ಲ. ಭಯಕ್ಕೆ ಹೆದರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆಂಬುದು ಸತ್ಯಕ್ಕೆ ದೂರವಾದ ಮಾತು. ಹಾಗೆಯೇ ಅವರನ್ನು ಕೊಲೆಗೈದಿರಬಹುದು ಎಂಬ ಊಹೆಗೂ ಕೂಡಾ; ಗಾಂಧಿಯೆಂಬ ಶಾಂತಿಧೂತನನ್ನು ಕೊಂದಂತಹ ಗೋಡ್ಸೆಯ ಮನಸ್ಥಿತಿಯವನು ಈ ಕೃತ್ಯ ಮಾಡಿರಲು ಸಾಧ್ಯ ಎನ್ನುತ್ತಾರಾದರೂ; ಆ ಬಗೆಗೆ ನಿಶ್ಚಿತವಾದ ದಾಖಲೆ ಸಿಗುವತನಕ ಉತ್ತರ ನಿಗೂಢವಾಗಿಯೆ ಇರುತ್ತದೆ. ಬಸವಣ್ಣನವರು ಮಾನವೀಯ ಅಂತಃಕರಣವನ್ನು ಹೊಂದಿದ್ದವರು. ನೊಂದವರೆಂದರೆ ಅವರ ಅಂತರಂಗದ ತುಂಬೆಲ್ಲಾ ಮಾತೃತ್ವವೇ ತುಂಬಿ ಬರುತ್ತಿತ್ತು. ತನ್ನ ಕಾರಣದಿಂದಾಗಿ, ಹರಳಯ್ಯ ಮಧುವರಸರಿಗೆ ಎಳೆಹೂಟೆ ಶಿಕ್ಷೆ ನಡೆದು ಎಷ್ಟೋ ವರ್ಷದ ಸಮಾನತೆಯ ಕನಸು ಸಾಕಾರ ಆಗದೆ ಹೋಯಿತಲ್ಲ ಎಂಬ ಅಂತರಂಗದ ನೋವು ಬಾಧಿಸಿರಬಹುದು ಆದರೆ ಅವರ ಕೊನೆಯ ದಿನಗಳ ಬಗ್ಗೆ ಇದಮಿತ್ಥಂ ಎಂದು ಹೇಳಲು ಸಮರ್ಪಕವಾದ ಯಾವುದೇ ಆಧಾರಗಳು ನಮಗೆ ದೊರೆತಿಲ್ಲ.

ಮುಂದೆ ಶರಣರೆಲ್ಲರೂ ಬಸವಣ್ಣನವರ ಆದೇಶದಂತೆ ವಚನವನ್ನು ಪಸರಿಸಲು ಎಲ್ಲೆಡೆಯೂ ಚದುರಿ ಹೋಗುತ್ತಿರುವಾಗ ಕಲಚೂರಿಯ ಸೈನ್ಯ ಅವರ ಮೇಲೆ ಧಾಳಿ ಮಾಡಿದ ಕುರುಹುಗಳು ಸಿಗುತ್ತವೆ.

ಇದೇ ಹೋರಾಟದಲ್ಲಿ ಮಡಿವಾಳ ಮಾಚಯ್ಯನವರೂ ಮೃತರಾಗುತ್ತಾರೆ ಅವರ ಸ್ಮಾರಕ ಗೊಡಚಿಯಲ್ಲಿ ಇಂದಿಗೂ ಇದೆ. ಗೊಡಚಿ, ಮುರಗೋಡ, ಕಾದರವಳ್ಳಿ, ರಣಗಟ್ಟಿ, ತಲವೂರು, ಜಗಳಬೆಟ್ಟ ಈ ಮೊದಲಾದೆಡೆ ಯುದ್ಧ ಸಂಭವಿಸಿರಬಹುದೆಂದು ಈ ಹೆಸರುಗಳೇ ಸೂಚಿಸುತ್ತವೆಂದು ಸ್ವಾಮಿಯವರು ಅಭಿಪ್ರಾಯಿಸಿದ್ದಾರೆ. ಮುಂದೆ ಉಳವಿಯಲ್ಲಿ ಸ್ವಲ್ಪ ಕಾಲ ಶರಣರೆಲ್ಲ ನೆಲೆಸಿ ಅಲ್ಲಿಂದ ಮುಂದೆ ಬೇರೆಡೆಗೆ, ದಕ್ಷಿಣದ ಕಡೆಗೆ ಸಾಗಿದಂತೆ ತೋರುತ್ತದೆ. ಚನ್ನಬಸವಣ್ಣನವರು ಉಳವಿಯಲ್ಲಿಯೇ ಐಕ್ಯವಾಗುತ್ತಾರೆ. ಆ ನಂತರದ ಜವಾಬ್ದಾರಿ ಅಕ್ಕನಾಗಮ್ಮನ ಮೇಲೆ ಬೀಳುತ್ತದೆ ಆಕೆಯೆ ಮುಂದೆ ಶರಣರನ್ನು ಮುನ್ನಡೆಸುತ್ತಾಳೆ.

ಮುಂದೆ ವಿಜಯನಗರದ ಅರಸನಾದ ಪ್ರೌಢದೇವರಾಯನ ಕಾಲದಲ್ಲಿ ವಚನಗಳ ಪುನರುಜ್ಜೀವನ ಕಾರ್ಯ ನಡೆಯುತ್ತದೆ. ನೂರೊಂದು ವಿರಕ್ತರು ಇಲ್ಲಿ ಸಮಾವೇಶಗೊಂಡು ಶರಣರ ವಚನಗಳನ್ನು ಸ್ಥಲಕಟ್ಟುಗಳ ನೆಲೆಯಲ್ಲಿ ಸಂಕಲಿಸುವ ಕಾರ್ಯವನ್ನು ಕೈಗೊಳ್ಳುತ್ತಾರೆ. ತೋಂಟದ ಸಿದ್ಧಲಿಂಗೇಶ್ವರರು ಇದರ ನೇತೃತ್ವವನ್ನು ವಹಿಸಿದ್ದರು ಎಂಬುದು ಇಲ್ಲಿ ಮುಖ್ಯವಾದ ಸಂಗತಿಯಾಗಿದೆ. ಶೂನ್ಯಸಂಪಾದನೆಗಳನ್ನು ವಚನಕಾರರ ಹಿನ್ನೆಲೆಯಲ್ಲಿ ಅವರ ವಚನಗಳ ಸಂಭಾಷಣೆಯ ನೆಲೆಯಲ್ಲಿ ಸಂಕಲಿಸಿದ ಪ್ರಕ್ರಿಯೆಗೆ ವಿಜಯನಗರ ಸಾಕ್ಷಿಯಾದುದಲ್ಲದೇ; ಸ್ವತಂತ್ರ ಕೃತಿಗಳೂ ಕೂಡಾ ಶರಣರ ಜೀವನ ಚರಿತ್ರೆಯನ್ನು ಕಟ್ಟಿಕೊಡುವ ಪ್ರಯತ್ನ ಮಾಡಿದವು. ಒಟ್ಟಾರೆಯಾಗಿ ಕಲ್ಯಾಣಕ್ರಾಂತಿ ಎಂಬ ಈ ಕೃತಿಯೊಳಗೆ ಸ್ವಾಮಿಯವರು ಮೂರು ವಿಭಾಗ ಮಾಡಿಕೊಂಡು ಆದರಲ್ಲಿ ಸಾಮಾಜಿಕವಾಗಿ, ಧಾರ್ಮಿಕವಾಗಿ, ಆರ್ಥಿಕವಾಗಿ ೧೨ನೇ ಶತಮಾನದಲ್ಲಿ ಆದಂತಹ ಬದಲಾವಣೆಗಳನ್ನು ಕುರಿತು ಮೊದಲ ಘಟ್ಟದಲ್ಲಿ ತಿಳಿಸಿದ್ದಾರೆ. ಸಾಮಾಜಿವಾಗಿ ಜನಸಾಮಾನ್ಯರನ್ನು ಮೇಲೆತ್ತುವ ಕೆಲಸವನ್ನು ಬಸವಣ್ಣನವರು ಮಾಡುತ್ತಾರೆ ಜೊತೆಗೆ ಕಾಯಕದ ಬಗೆಗೆ ವಿಶೇಷವಾದ ಕಾಳಜಿಯನ್ನು ತೋರಿ ಪ್ರತಿಯೊಬ್ಬರೂ ಕಾಯಕದಲ್ಲಿ ನಿರತರಾಗುವಂತೆ ಮಾಡುತ್ತಾರೆ.

ಎರಡನೆಯ ಘಟ್ಟದಲ್ಲಿ ಸಾಮಾಜಿಕ, ಧಾರ್ಮಿಕ, ಆರ್ಥಿಕವಾಗಿ ಸಬಲವಾದಂತಹ ಶರಣ ಸಮೂಹ ಸಾಮಾಜಿಕ ಸಮಾನತೆಯಲ್ಲಿಯೂ ಮುಂದಿದ್ದಿತು. ಇದೇ ಸಂದರ್ಭದಲ್ಲಿ ನಡೆದಂತಹ ಹರಳಯ್ಯ ಮತ್ತು ಮಧುವರಸರ ಮಕ್ಕಳ ವಿವಾಹವು ಕಲ್ಯಾಣ ಕ್ರಾಂತಿಗೆ ನಾಂದಿಯಾಗಿ ಹೋಯಿತು. ಸಮಗ್ರವಾಗಿ ಅದೊಂದು ಪ್ರಗತಿದಾಯಕವಾದ ಸಂಗತಿಯಾಗಿದ್ದರೂ ಸಹಾ ಶರಣರನ್ನು ಹೊರತುಪಡಿಸಿ ಕಲ್ಯಾಣದ ಇತರರಿಗೆ ಅದು ವರ್ಣಸಂಕರವಾಗಿ ತೋರಿತು. ಈ ಕಾರಣದಿಂದ ಹರಳಯ್ಯ ಮತ್ತು ಮಧುವರಸರ ಹತ್ಯೆಯಾಯಿತು ಇದೇ ಸಂದರ್ಭದಲ್ಲಿ ಬಿಜ್ಜಳ ದೊರೆಯ ಅಂತ್ಯವೂ ಆಗಿಹೋಯಿತು. ವಿಪರ್ಯಾಸಕ್ಕೆ ಈ ಸಾವಿನ ಹೊಣೆಯನ್ನು ಶರಣರ ಮೇಲೆ ಹೊರಿಸಲಾಯಿತು.

ಕ್ರಾಂತಿ ಘಟಿಸಿದ ಮೇಲೆ ಶರಣರಾರೂ ಕಲ್ಯಾಣದಲ್ಲಿ ಉಳಿಯುವ ವಾತಾವರಣವಿಲ್ಲದೆ ನಾಡಿನ ಮೂಲೆ ಮೂಲೆಗೆ ತೆರಳಿ ವಚನಜ್ಞಾನವನ್ನು ಹಲವೆಡೆ ಪ್ರಸರಿಸಿದರು. ಇದರ ಜೊತೆಗೆ ತಮ್ಮ ಪ್ರಾಣವನ್ನೂ ಲೆಕ್ಕಿಸದೇ ವಚನಗಳನ್ನು ರಕ್ಷಿಸುವುದೇ ಅವರ ಪರಮಗುರಿಯಾಯಿತು.

ಹೀಗೆ ಒಟ್ಟಾರೆಯಾಗಿ ಜಗತ್ತಿನಲ್ಲಿ ಹಿಂದೆಂದೂ ಜರುಗದಂತಹ ಸಾಮಾಜಿಕ ಚಳುವಳಿಯು ಕರ್ನಾಟಕದಲ್ಲಿ ನಡೆದಿರುವುದು ಅದು ನಮ್ಮ ಸಾಂಸ್ಕೃತಿಕ ಪರಂಪರೆಯ ಹಿರಿಮೆ ಎಂದೇ ಕರೆಯಬೇಕು ಆದರೆ ಆ ಪ್ರಯತ್ನಕ್ಕೆ ಹಿನ್ನಡೆಯಾದುದಕ್ಕೆ ವ್ಯಥೆ ಪಡಬೇಕಾಗುತ್ತದೆ. ಈ ನೆಲೆಯಲ್ಲಿ ಕಲ್ಯಾಣಕ್ರಾಂತಿಯ ಹಿಂದು ಮುಂದುಗಳನ್ನು ತಿಳಿಸುವುದು ಅದರ ಸತ್ಯಾಸತ್ಯತೆಯನ್ನು ಜನರಿಗೆ ತಿಳಿಸುವುದು ಸ್ವಾಮಿಯವರ ಕಾಳಜಿಯಾದುದರಿಂದ ಈ ಕೃತಿ ಆ ನಿಟ್ಟಿನಲ್ಲಿ ಗುರುತರವಾದ ಜವಾಬ್ದಾರಿಯನ್ನು ನಿಭಾಯಿಸಿದೆ ಎಂದು ಹೇಳಬಹುದು.

## ಕೊನೆ ಟಿಪ್ಪಣಿಗಳು

1. ಡಾ ಎಚ್. ತಿಪ್ಪೇರುದ್ರಸ್ವಾಮಿ : ಕಲ್ಯಾಣಕ್ರಾಂತಿ : ಹಿಂದು–ಮುಂದು, ಪು.ಸಂ ೧೯
2. ಅದೇ, ಪು.ಸಂ ೬–೭
3. ರಹಮತ್ ತರೀಕೆರೆ : ಪ್ರತಿಸಂಸ್ಕೃತಿ, ಪು.ಸಂ ೯
4. ಡಾ. ಪಿ.ವಿ ನಾರಾಯಣ : ವಚನ ಸಾಹಿತ್ಯ, ಪು.ಸಂ ೩೬
5. ಪೂರ್ವೋಕ್ತ ೧, ಪು.ಸಂ ೧೫
6. ಅದೇ, ಪು.ಸಂ ೪೧
7. ರಂಜಾನ್ ದರ್ಗಾ : ಜಾತಿ ವ್ಯವಸ್ಥೆಗೆ ಸವಾಲಾದ ಶರಣರು, ಪು.ಸಂ ೪೧
8. ಅದೇ, ಪು.ಸಂ ೪೨
9. ಪೂರ್ವೋಕ್ತ ೧, ಪು.ಸಂ ೭೩
10. ಅದೇ, ಪು.ಸಂ ೭೪–೭೫
11. ಅದೇ, ಪು.ಸಂ ೮೪
12. □□. □□□. □□□□□□□□□□□□□□□□□□□□□ : □□□□□□□ □□□□□□□□ : □□□□□□–□□□□□□, □□.□□ ೧೩

## ಪರಾಮರ್ಶನ ಗ್ರಂಥಗಳು


1. ಡಾ ಎಚ್. ತಿಪ್ಪೇರುದ್ರಸ್ವಾಮಿ : ಕಲ್ಯಾಣಕ್ರಾಂತಿ : ಹಿಂದು–ಮುಂದು, ಚಿತ್ತರಗಿ ಶ್ರೀ ವಿಜಯಮಹಾಂತೇಶ್ವರ ಧರ್ಮಪ್ರಸಾರಕ ಮಂಡಲ ಇಲಕಲ್ಲ, ೧೯೮೪
2. ರಹಮತ್ ತರೀಕೆರೆ : ಪ್ರತಿಸಂಸ್ಕೃತಿ, ಅಭಿನವ ಪ್ರಕಾಶನ ಬೆಂಗಳೂರು ಐದನೆಯ ಮುದ್ರಣ ೨೦೧೩
3. ಡಾ. ಪಿ.ವಿ ನಾರಾಯಣ : ವಚನ ಸಾಹಿತ್ಯ, ಅಖಿಲ ಭಾರತ ಶರಣ ಸಾಹಿತ್ಯ ಪರುಷತ್ತು ಮೈಸೂರು–೧೯೯೭
4. ರಂಜಾನ್ ದರ್ಗಾ : ಜಾತಿ ವ್ಯವಸ್ಥೆಗೆ ಸವಾಲಾದ ಶರಣರು, ಲೋಹಿಯಾ ಪ್ರಕಾಶನ ಬಳ್ಳಾರಿ, ೨೦೧೩